International Journal of Kannada Research
www.kannadajournal.com

ISSN: 2454–5813
IJKR 2019; 5(3): 80-85
© 2019 IJKR
www.kannadajournal.com
Received: 01-05-2019
Accepted: 04-06-2019

**ಡಾ.ಸಂಜೀವ ಆರ್.ನಾಯಕ**
ಸಹಾಯಕ ಪ್ರಾಧ್ಯಾಪಕರು
ಕೆ.ಎಲ್.ಇ.ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ ಹಾವೇರಿ

**Correspondence**
**ಡಾ.ಸಂಜೀವ ಆರ್.ನಾಯಕ**
ಸಹಾಯಕ ಪ್ರಾಧ್ಯಾಪಕರು
ಕೆ.ಎಲ್.ಇ.ಸಂಸ್ಥೆ, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ ಹಾವೇರಿ

# ದೈವ ಭಕ್ತಿ ಆಚರಣೆ ಮತ್ತು ('ಪಾರ್ಥನೆ') ಹರಕೆ (ಕರ್ನಾಟಕ ಪ್ರದೇಶದ ಹಬ್ಬ, ಜಾತ್ರೆಗಳನ್ನು ಅನುಲಕ್ಷೀಸಿ)

**ಡಾ.ಸಂಜೀವ ಆರ್.ನಾಯಕ**

ನಮ್ಮ ದೇಶ ಆಚರಣೆ–ಸಂಪ್ರದಾಯಗಳ ನೆಲೆ ಬೀಡು. ಸಂಸ್ಕೃತಿ ಸಂಪ್ರದಾಯಗಳಿಗೆ ಅವುಗಳದೇ ಆದ ವಿಶಿಷ್ಟ ತವರೂರ, ಹರಕೆ ನಿತ್ಯದ 'ಪಾರ್ಥನೆ' ಯಿಂದ ಭಿನ್ನವಾದದು ಹಾಗೂ ವಿಶಿಷ್ಟವಾದದು. ಈ ದೇಶದಲ್ಲಿ ವ್ಯಕ್ತಿ ತನ್ನ ವಿವಿಧ ಇಷ್ಟಾರ್ಥ ಪೂರೈಸಿಕೊಳ್ಳಲು ಹೊರುವ ಹರಕೆಗಳಿಗೆ ಸೇವೆಗಳಿಗೆ ಇತಿ ಮಿತಿ ಇಲ್ಲ. ಭಕ್ತ ಹರಕೆ ಹೊರುತ್ತಾರೆ ದೇವರು ಇಷ್ಟಾರ್ಥಾ ನೆರವೇರಿಸಿ ಕೊಡುತ್ತದೆ. ಎಂಬ ನಂಬಿಕೆ ವಿಶ್ವಾಸಗಳಿಂದ, ಇದರ ಪರಿಣಾಮವೇ ತಲೆಗೂದಲು ತಗೆಯುವದು, ಉರುಳು ಸೇವೆ ಮಾಡುವುದು, ಕೆಂಡದ ಮೇಲೆ ಓಡುವುದು, ಭೀತಿ ನಿವಾರಣೆಗೆ ಕೊರಳಲ್ಲಿ ಕಾಯುಕ. ಬೇರು ಕಟ್ಟಿ ಕರಿದಾರ ಧರಿಸುವದು– ಈ ಹರಕೆಗಳಿಗೆ ಹಲವು ಮುಖ್ಯಲಗಳು. 'ಹರಕೆ ಹನ್ನೆರಡು ವರುಷ ಮುಡಿಪು ಮುವತ್ತು ವರುಷ' ಎಂಬ ಗಾದೆಯೇ ಜನಪದಲ್ಲಿದೆ. ಜಾತ್ರೆಯ ಸಂದರ್ಭದಲ್ಲಿ ಆಚರಣೆ ಮತ್ತು ಹರಕೆಗಳನ್ನು ಪ್ರತ್ಯೇಕವಾಗಿ ನೋಡುವುದು ಕಷ್ಟ ಸಾಧ್ಯ. ಕೆಂಡ ಹಾಯುವುಂತಹ ಪದ್ದತಿಗಳು ಆಚರಣೆ ಮತ್ತು ಹರಕೆ ಎರಡು ಒಂದೇಯಾಗಿದೆ. ಜಾತ್ರೆಯೆ ಕೆಲವು ಸಂಪ್ರದಾಯಗಳ , ಜನಪದ ಕಲೆಗಳು,ಹಾಡುಗಳು ಹರಕೆಯಾಗಿ ಕಂಡು ಬರುತ್ತದೆ ಕೆಲವು ಆಚರಣೆಗಳು ಹರಕೆಯನ್ನು ಒಳಗೊಳ್ಳುತ್ತವೆ. ಹರಕೆಯನ್ನು ಹೇಳಿಕೊಂಡವರು ಮಾತ್ರ ನೆರವೇರಿಸುತ್ತಾರೆ. ಆದರೆ ಆಚರಣೆ ಕಡ್ಡಾಯ ಹಾಗೂ ಸಾಮೂಹಿಕ.ಹರಕೆ ವೈಯಕ್ತಿಕ ಅದು ಬಹಳ ಸಲ ಆಚರಣೆಯ ರೂಪದಲ್ಲಿಯೇ ನಡೆಯತ್ತದೆ.

ಪ್ರತಿಯೊಂದು ಕ್ಷೇತ್ರದಲ್ಲಿ ಆಧುನಿಕ ತಾಂಡವವಾಡುತ್ತಿದ್ದರೂ ಹರಕೆ, ಆಚರಣೆ, ಸಂಪ್ರದಾಯಗಳಿಗೇನೂ ಕೊರತೆಯಿಲ್ಲ. ಏಕೆಂದರೆ ಆಧುನಿಕತೆ ಮೂಡಿರುವುದು ಈಗ.ಆದರೆ ಹರಕೆಗಳು ಹುಟ್ಟಿರುವದು ಶತಶತಮಾನಗಳ ಹಿಂದೆ. ಅಂದಿನಿಂದ ಇಂದಿನವರೆಗೆ ಹರಕೆಗಳು ಬೆಳೆದು ಬಂದಿದೆ, ಮಾಡುವ ಶ್ರದ್ಧೆಯುಳ್ಳವರಿಗೆ ಅದು ಧಾರ್ಮಿಕ ನಂಬಿಕೆಯ ಹರಕೆ, ನೋಡುವವರಿಗೆ ಇದೊಂದು ಅನಿಷ್ಟ ಪದ್ಧತಿ, ಮೂಢನಂಬಿಕೆಯಾಗಿ ತೋರುವುದು.

ಜನಪದ ಆಚರಣೆಗಳಲ್ಲೊಂದಾದ ಈ ಹರಕೆಯ ದಿನನಿತ್ಯದ ಪ್ರಾರ್ಥನೆಗಿಂತ ಭಿನ್ನ ಹಾಗೂ ವಿಶಿಷ್ಟವಾದುದು. ನಿತ್ಯದ ಪ್ರಾರ್ಥನೆಯು ಹೆಚ್ಚಾಗಿ ವ್ಯಕ್ತಿಗತ ಆಶ್ರಯ ಹೊಂದಿರುವದು. ಆದರೆ ಹರಕೆಯಲ್ಲಿ ವ್ಯಕ್ತಿಗತ ಆಶಯ ಇದ್ದರು ಬಹುಪಾಲು ಸಾರ್ವತ್ರಿಕ/ ಕೌಟುಂಬಿಕ ಹಿತ ಹೊಂದಿರುವದು ಸಾಮಾನ್ಯ. ಈ ಹಿನ್ನಲೆಯಲ್ಲಿ ಸಾಮಾನ್ಯವಾಗಿ ಹರಕೆಗಳನ್ನು ವ್ಯಕ್ತಿಗತ, ಕೌಟುಂಬಿಕ, ಸಾರ್ವತ್ರಿಕ/ ಊರ ಹರಕೆಗಳೆಂದು ಸ್ಥೂಲವಾಗಿ ವಿಂಗಡಿಸಬಹುದು, ವ್ಯಕ್ತಿಗತ ಹರಕೆಗಳು ವೈಯುಕ್ತಿಕ ಹಿತ,ಾಸಕ್ತಿ ಹೊಂದಿದ್ದರೆ, ಕೌಟುಂಬಿಕ ಹರಕೆಗಳು ಕುಟುಂಬದ ಶಾಂತಿ – ಸುಖವನ್ನು ಬಯಸುತ್ತದೆ. ಹಾಗೆಯೇ ಸಾರ್ವತ್ರಿಕ ಹರಕೆಗಳು ಸಮಷ್ಟಿಯ ಶುಭಾಕಾಂಕ್ಷೆಯ ಊರೊಟ್ಟಿನ ಹರಕೆಯಾಗಿದ್ದು, ಊರಿನ ಮುಖಂಡ, ಪಟೇಲ ಇದನ್ನು ಹೇಳಿಕೊಳ್ಳುತ್ತಾನೆ.

ಭಕ್ತರು ದೇವತೆಗಳಿಗೆ ಹೇಳಿಕೊಂಡದ್ದು ಕಾರ್ಯಸಿದ್ಧಿಯಾದಾಗ ಅರ್ಪಿಸುವ ಕಾಣಿಕೆಯೆ ಹರಕೆಯಾಗಿದೆ. ಒಳ್ಳೆಯದಾಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವುದೆ ಹರಕೆ. ಈ ಹರಕೆಯ ವಸ್ತು, ಹಣ, ಸೇವೆ,ಬಲಿ– ಹೀಗೆ ನಾನಾ ರೂಪದಲ್ಲಿರುತ್ತದೆ. ಒಟ್ಟಾರೆ ತಮ್ಮ ಇಷ್ಟಾರ್ಥ ಪೂರೈಸಲಿ ಬಿಡಲಿ ಭಕ್ತರು ದೇವರಿಗೆ ಕೊಟ್ಟ ಮಾತಿನಂತೆ ಹರಕೆಯನ್ನು ಸಲ್ಲಿಸುತ್ತಾರೆ.

ತೇರು/ರಥೋತ್ಸವ ಪ್ರಧಾನ ಜಾತ್ರೆಗಳು,ಪಲ್ಲಕಿ /ರಥ ಪಲ್ಲಕ್ಕಿ ಪ್ರಧಾನ ಜಾತ್ರೆಗಳು,ಗದ್ದುಗೆ,ಕಲಶ ಪ್ರಧಾನ ಜಾತ್ರೆಗಳು,ಗಡಿ ಜಾತ್ರೆಗಳು,ವಿಶಿಷ್ಟ ಜಾತ್ರೆಗಳು,ಇತರ ಧರ್ಮೀಯರ ಜಾತ್ರೆಗಳಲ್ಲಿ ಕೂಡಾ ಹರಕೆಯ ಸಂಪ್ರದಾಯ ಕಂಡು ಬರುತ್ತದೆ. ಕೆಲವು ಜಾತ್ರೆಯಲ್ಲಿ ಸ್ತ್ರೀದೇವತೆಗಳಿಗೆ ಹರಕೆ ಸಲ್ಲುತ್ತದಾದರೂ

ಕೆಲವೊಂದು ಪರಿವಾರ ದೇವತೆಗಳಿಗೂ, ಮಾರಿ ದೇವತೆಗಳಿಗೆ ಬಲಿಯ ಹರಕೆ ಇದ್ದು, ಕೆಲವು ಶಿಷ್ಟ ದೇವತೆಗಳಿಗೆ ಮಾತ್ರ ಬಲಿ ಇರುವುದಿಲ್ಲ. ನಾನು ಇಲ್ಲಿ ಹೇಳಿರುವ ಎಲ್ಲಾ ಹರಕೆಗಳು ಇಂದಿಗೂ ನಮ್ಮಲ್ಲಿ ಪರಿಸರದಲ್ಲಿ ಈಗಲೂ ಪ್ರಚಲಿತವಾಗಿದೆ ಎಂದು ಹೇಳಲಾರೆ. ಹರಕೆಗಳು ಹಿಂದಿನ ಕಾಲದಲ್ಲಿ ಇರುವ ರೀತಿಯಲ್ಲಿ ಇರಲಾರದೆ ಕ್ರಮೇಣ ಆಧುನಿಕ ಪರಿಸರದ ಪ್ರಭಾವದಲ್ಲಿ ಹರಕೆಗಳಲ್ಲಿ ಬದಲಾವಣೆ ರೂಪ ಕಂಡು ಬಂದಿದೆ.

ಜಾತ್ರೆ ನಡೆಯುವ ದಿನಗಳಲ್ಲಿ ಹರಕೆ ಹೇಳಿಕೊಂಡವರು ಹರಕೆ ತೀರಿಸುವದು ಅನಿವಾರ್ಯ. ಜಾತ್ರೆಯ ಹಗಲ ಹಬ್ಬದ ದಿನ ಹರಕೆಗಳೆಲ್ಲ ಅರ್ಪಿಸಲಾಗುತ್ತದೆ. ಹರಕೆಯನ್ನು ಪರಿವಾರ ಮತ್ತು ಪ್ರಧಾನ ದೇವರಿಗೆ ಸಂದಾಯವಾಗುವಂತೆ ಹರಕೆಯನ್ನು ಸಲ್ಲಿಸುತ್ತಾರೆ.ತೇರು/ರಥೋತ್ಸವ ಪ್ರಧಾನ ಜಾತ್ರೆಗಳು, ಪಲ್ಲಕಿ /ರಥ ಪಲ್ಲಕ್ಕಿ ಪ್ರಧಾನ ಜಾತ್ರೆಗಳ ಹರಕೆಗಳಲ್ಲಿ ಪ್ರಮುಖವಾಗಿ ತುಲಾಭಾರ ಕಂಡು ಬಂದರೆ ಕಲಶ ಜಾತ್ರೆಯಲ್ಲಿ (ಬಂಡಿ ಜಾತ್ರೆ) ಕೆಂಡ ಹಾಯುವುದು, ತುಲಾಭಾರ, ದೇವರುಗಳಿಗೆ ವರ್ಷಕ್ಕೊಂದು ಕೋಳಿ ಬಲಿಕೊಡುವುದು, ಅಡಿಅಕ್ಕಿ ಕೊಡುವುದೇ ಮೊದಲಾದ ಪಾರಂಪರಿಕ ಹರಕೆಗಳು ರೂಢಿಯಲ್ಲಿದೆ.ಹೂವಿನ ಮಕ್ಕಳ ಕುಣಿತ, ಬಲಿ ಮಕ್ಕಳ ಸೇವೆಯ ಹರಕೆಯನ್ನು ಒಪ್ಪಿಸುತ್ತಾರೆ. ಇನ್ನೂ ಕೆಲವು ಸೇವೆಗಳು ಬಂಡಿ ಹಬ್ಬದಲ್ಲಿ ಗ್ರಾಮ ದೇವತೆಗಳಿಗೆ ಸಲ್ಲುತ್ತದೆ. ಇಂತಹ ಹರಕೆ ಆಚರಣೆಗಳ ಸಂಕೀರ್ಣ ಸ್ವರೂಪವನ್ನು ಹೊಂದಿರುವ ಜಾತ್ರೆಗಳನ್ನು ಈ ಜಿಲ್ಲೆಯಲ್ಲಿ ನೋಡ ಬಹುದು. ಸಂಪ್ರದಾಯ ಮತ್ತು ನಂಬಿಕೆ ಬಹುತೇಕ ಧಾರ್ಮಿಕ ಮತ್ತು ದೈವಿಕ ಸಂಭಂಧವನ್ನು ಪಡೆದಿರುತ್ತದೆ. ಇದು ನಂಬಿಕೆಯನ್ನು ಆಧರಿಸಿದ್ದು ವಿಶೇಷ ಸಂದರ್ಭಗಳಿಗೆ ಅನ್ವಯಿಸುತ್ತವೆ. ಹಾಗೂ ಆಚರಿಸಲ್ಪಡುತ್ತವೆ. ನಿತ್ಯ ಜೀವನದಲ್ಲಿ ಕಷ್ಟಗಳು ನಡೆಯದಿರುವಂತೆ ಮಾನವ ಎಚ್ಚರವಹಿಸತ್ತಾನೆ. ಇಂತಹ ಎಚ್ಚರಗಳು, ಕಾಳಜಿಗಳೇ ಅನೇಕ ನಂಬಿಕೆಗಳಿಂದ ಕೂಡಿರುತ್ತವೆ. ಹಾಗೂ ಆಚರಣೆಗಳನ್ನು ಒಳಗೊಂಡಿರುತ್ತವೆ. ಇಂತಹ ಅನೇಕ ಆಚರಣೆಗಳು ಜಾತ್ರೆಗಳಲ್ಲಿ ಹಬ್ಬ ಹರಿದಿನಗಳಲ್ಲಿ ಹರಕೆಯ ರೂಪದಲ್ಲಿ ನೆರವೆರುತ್ತವೆ.

ಹರಕೆ ಆಚರಣೆಗಳಲ್ಲಿ ಒಂದು ಪ್ರಕೃತಿಯ ಅನಂತ ಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತಾ ಬಂದ ಹಲವು ಬಗೆಯ ಆಚರಣೆಗಳಿಗೆ ಹರಕೆ ಮೂಲ ಕಾರಣ. ಹಾಗೆಯೇ ಹರಕೆಗಳನ್ನು ವೈಯಕ್ತಿಕ ಹರಕೆ , ಕೌಟುಂಬಿಕ ಹರಕೆ, ಊರ ಹರಕೆ ಎಂದು ವಿಭಾಗಿಸಬಹುದು. ವೈಯಕ್ತಿಕ ಹರಕೆಯಲ್ಲಿ ವ್ಯಕ್ತಿಗತವಾದ ಕುಂದು ಕೊರತೆಗಳನ್ನು ಹೋಗಲಾಡಿಸಲು ದೇವರಲ್ಲಿ ಹರಕೆ ಮಾಡಿಕೊಂಡು ಅದನ್ನು ತೀರಿಸುವುದು ಈ ಹರಕೆ ಯಾರು ಬೇಕಾದರೂ ಹೊರಬಹುದು. ಕೌಟುಂಬಿಕ ಹರಕೆಯಲ್ಲಿ ಕುಟುಂಬದಲ್ಲಿ ಶಾಂತಿ, ಸುಖ, ಆರೋಗ್ಯ ನೆಲಸಲೆಂದು ಮನೆಯ ಯಜಮಾನರು ಹರಕೆ ಹೊತ್ತು ಅದನ್ನು ತೀರಿಸುವುದು. ಊರ ಹರಕೆಯಲ್ಲಿ ಸಾಮಾನ್ಯವಾಗಿ ಊರಿಗೆ ಕಾಲರ, ಸಿಡುಬು, ಪ್ಲೇಗು, ಮುಂತಾದ ರೋಗ ರುಜಿನಗಳು ಬಂದಾಗ, ಇಲ್ಲವೇ ಕಾಲದಿಂದ ಕಾಲಕ್ಕೆ ಸರಿಯಾಗಿ ಮಳೆ-ಬೆಳೆಯಾಗದೆ ಹೋದಾಗ, ದೇವರಲ್ಲಿ ಹರಕೆಯನ್ನು ಹೊರುವುದು. ಇದನ್ನು ಸಾಮಾನ್ಯವಾಗಿ ಊರಿನ ಪ್ರಮುಖರಾದ ಪಟೇಲ, ಶಾನುಬೋಗ ಇಲ್ಲವೇ ಊರಿನ ಗಣ್ಯರು ಮಾಡಿಕೊಳ್ಳುತ್ತಾರೆ. ಊರಿಗೆ ಒಳ್ಳೆಯದಾದಾಗ ಊರಿನ ಜನರ ಸಹಕಾರದಿಂದ ಹರಕೆಯನ್ನು ತೀರಿಸುತ್ತಾರೆ. ಒಟ್ಟಿನಲ್ಲಿ ಮನೆಕಟ್ಟಲು ಮದುವೆಯಾಗಲು ಮಕ್ಕಳಾಗಲು, ಆರೋಗ್ಯ, ಉದ್ಯೋಗ, ವಿದ್ಯಾಭ್ಯಾಸ ಹೀಗೆ ಎಲ್ಲಾ ಕಾರಣಗಳಿಗೂ ಹರಕೆ ಹೊರುತ್ತಾರೆ. ಈ ಹರಕೆಯನ್ನು ದೇವರಿಗೆ, ಕಲ್ಲಿಗೆ,ಮರಕ್ಕೆ ಮುಂತಾದ ಕಡೆಗಳಲ್ಲಿ ಕಟ್ಟುತ್ತಾರೆ.

ಸಮಾಜದ ಒಳಿತಿಗಾಗಿ ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮೋತ್ಸಾಹಗಳಿಂದ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬ ಜಾತ್ರೆಗಳು ಈ ಜಾತ್ರೆಯಲ್ಲಿ ದೈವ ಹಾಗೂ ಧರ್ಮ ಸಂಬಂಧಿ ಆಚರಣೆಗಳು ಮುಖ್ಯ ಈ ದೈವ ಸಂಬಂಧವಾದ ಆಚರಣೆಗಳು ಧಾರ್ಮಿಕವಾಗಿ ಅನುಷ್ಠಾನಗೊಳ್ಳಬೇಕು ಇದರಿಂದ ಸಾಮಾಜಿಕ ರಾಜಕೀಯ ಬಾಂಧವ್ಯಗಳು ಉತ್ತಮಗೊಳ್ಳುತ್ತವೆ. ಅನೇಕ ಮಂದಿ ಒಟ್ಟಿಗೆ ಒಂದಡೆ ಕಲೆತು ವಿಚಾರ ವಿನಿಮಯ ನಡೆಸಲು ಸುಖ, ದುಃಖಗಳನ್ನು ಹಂಚಿಕೊಳ್ಳಲು ಜಾತ್ರೆ ಒಂದು ಸಾಧನ. ಹೀಗೆ ಸೇರುವುದರಿಂದ ಅನ್ಯರ ಧರ್ಮ ಹಾಗೂ ಆಚರಣೆಗಳ ಅರಿವು ಇತರರಿಗೂ ಆಗುವುದಲ್ಲದೆ,ಎರಡು ಮತದವರ ನಡುವೆ ಬಾಂಧವ್ಯ ಏರ್ಪಡಿಸಲು ಕಾರಣವೂ ಆಗುತ್ತದೆ ಅದಲ್ಲದೆ ಅದಲ್ಲದೆ ಸಾಂಘಿಕವಾಗಿ ನಡೆಸುವ ಜಾತ್ರೆಗಳ ಆಚರಣೆಗಳು ಹಾಗೂ ಹರಕೆಗಳಲ್ಲಿ ವಿಶಿಷ್ಟವಾಗಿರುವ ಹರಕೆಗಳಲ್ಲಿ ಈ ಕೆಳಗಿನಂತೆ ನೋಡಬಹುದು

**ಉಡುಗೊರೆ ಹರಕೆಗಳು**

ಪ್ರತಿ ಗ್ರಾಮದಲ್ಲಿ ಪೌರಾಣಿಕ, ಜನಪದ ಮತ್ತು ಪರಿವಾರ ದೇವತೆಗಳಿಗೆ ನಾವು ಬೇಡಿ ಕೊಂಡಂತೆ ಬಗೆ ಬಗೆಯ ವಸ್ತು ಆಭರಣಗಳನ್ನು ಸಲ್ಲಿಸುವ ಹರಕೆಯೇ ಉಡುಗೊರೆಯ ರೂಪದ ಹರಕೆಯಾಗಿದೆ. ಕೆಲವರು ತಮ್ಮ ಮೈಮೇಲೆ ಧರಿಸಿದ ಒಡವೆಗಳನ್ನು ಕಳಚಿ ದೇವರಿಗೆ ಅರ್ಪಿಸುವರು ಮಕ್ಕಳಾದ ಹೆಂಗಸರು ತಮಗೆ ಮಕ್ಕಳಾದರೆ ಮೈಸುಲಿಗೆ ಕೊಡುವುದಾಗಿ ಹರಕೆ ಮಾಡಿ ಕೊಳ್ಳುತ್ತಾರೆ. ಮೈಸುಲಿಗೆ ಎಂದರೆ ಮೈಮೇಲೆ ಧರಿಸಿದ ಹೊನ್ನಿನ , ಬೆಳ್ಳಿಯ ಮತ್ತು ಇತರ ಆಭರಣಗಳನ್ನು ಕಳಚಿ ದೇವರಿಗೆ ಕಾಣಿಕೆಯಾಗಿ ಅರ್ಪಿಸುವುದು,ಬೆಳ್ಳಿಯ ಪಲ್ಲಕ್ಕಿ ತೊಟ್ಟಿಲು, ಚಿನ್ನ ಬೆಳ್ಳಿಯ ಪಾದುಕೆ. ಮುಖ-ಮೀಸೆ, ಕಿರೀಟ, ಛತ್ರಿ-ಚಾಮರ, ಕತ್ತಿ, ಗೆಜ್ಜೆ ಮೊದಲಾದವುಗಳಲ್ಲದೇ ಸಾರ್ವಜನಿಕ ಸೇವೆಗೆಂದು ಪಾತ್ರೆ ಪಗಡೆಗಳಂತಹ ವಸ್ತುಗಳನ್ನು ಉಡುಗೊರೆಯಾಗಿ ಹರಕೆ ರೂಪದಲ್ಲಿಸಲ್ಲುತ್ತದೆ.

**ಸಂತಾನ ಮತ್ತು ಸಮೃದ್ದಿಯ ಹರಕೆಗಳು**

ಈ ಉದ್ದೇಶವನ್ನು ಹರಕೆ ಒಪ್ಪಿಸುವಾಗ ಬಳಸುವ ವಸ್ತುಗಳ ಹಿನ್ನೆಲೆಯಿಂದಲೂ ಗುರುತಿಸಬಹುದು. ಹಿಂಗಾರ, ಅಡಿಕೆ, ವಿಳ್ಯದೆಲೆ, ಕಂಕಣ, ಕುಂಕುಮ, ಸೊಪ್ಪುಗೂಡಿರುವ ತೆಂಗಿನಕಾಯಿ, ಅಕ್ಕಿ, ಅರಿಸಿನ ಮತ್ತು ಕುಬುಸಗಳೆಲ್ಲ ಸಂತಾನ ಮತ್ತು ಸಮೃದ್ದಿ ಸೂಚಕಗಳಾಗಿವೆ. ಮದುವೆಯ ಕಾರ್ಯಕ್ರಮಗಳಲ್ಲಿ ಈ ಮೇಲಿನ ವಸ್ತುಗಳು ಬಳಕೆ ಆಗುತ್ತವೆ. ಆದ್ದರಿಂದಲೆ ಹರಕೆಗಳನ್ನು ಸಂತಾನ ಮತ್ತು ಸಮೃದ್ದಿಗೆ ಸಂಬಂಧಿಸಿದವು ಎಂದು ಗುರುತಿಸಲಾಗಿದೆ. ಈ ಜಿಲ್ಲೆಯ ಬಹುತೇಕ ಜಾತ್ರೆಗಳಲ್ಲಿ ಹರಕೆ ಹೇಳಿಕೊಂಡುವರು ಬಾಳೆಗೊನೆ ಎಳನೀರುಗೊನೆ ಮುಂತಾದ ಪ್ರಾದೇಶಿಕವಾಗಿ ಲಭ್ಯವಾದ ಹಣ್ಣುಗಳನ್ನು ಕಟ್ಟಿ ಹರಕೆ ತೀರಿಸುತ್ತಾರೆ.ಈ ಹರಕೆಯನ್ನೆ ಜಾತ್ರೆಯ ದಿವಸ ಸಂದಾಯಮಾಡುತ್ತಾರೆ. ಫಲ ಯಾವಾಗಲೂ ಸಮೃದ್ಧಿಯನ್ನು ಸಂಕೇತಿಸುತ್ತದೆ.

**ತುಲಾಭಾರ**

ಹರಕೆ ಹೇಳಿಕೊಂಡವರು ಸಮಾನ ತೂಕದಷ್ಟು ಹಣ್ಣು ಹಂಪಲಗಳನ್ನು ಹಣವನ್ನು,ಇನ್ನಿತರ ವಸ್ತುವನ್ನು ಕೊಡುವ ಸೇವೆಯೇ ತುಲಾಭಾರದ ಹರಕೆ. ತಕ್ಕಡಿಯಲ್ಲಿ ಒಂದು ಕಡೆ ಹರಕೆ ಹೇಳಿಕೊಂಡವರು ಒಂದು ಕಡೆ ವಸ್ತುವನ್ನು ಇಟ್ಟು ತೂಗಿ ಕಾಣಿಕೆ ನೀಡುವರು.ಹರಕೆ ಹೊತ್ತು ವ್ಯಕ್ತಿಯ ಸಮ ತೂಕದ ವಸ್ತುವನ್ನು ದೇವರಿಗೆ ಒಪ್ಪಿಸುವರು. ಹರಕೆ ಹೇಳಿಕೊಂಡವರು ಸ್ನಾನ ಮುಗಿಸಿ

ದೇವಸ್ಥಾನಕ್ಕೆ ಬಂದು ಪೂಜಾರಿಗಳಿಂದ ಮಂತ್ರ ಪಠಣ ಮಾಡಿಸಿ ತಾವು ಹೇಳಿಕೊಂಡ ವಸ್ತುಗಳನ್ನು ತಂದು ತೂಕಮಾಡಿ ದೇವರಿಗೆ ಒಪ್ಪಿಸುತ್ತಾರೆ. ಹಲಸಿನ ಹಣ್ಣು ಅಕ್ಕಿ, ಬೆಲ್ಲ, ತೆಂಗಿನಕಾಯಿ, ಅನಾನಸು ಮತ್ತು ಬಾಳೆಹಣ್ಣುಗಳನ್ನು ತುಲಾಭಾರಕ್ಕೆ ಬಳಸುತ್ತಾರೆ.ತುಲಾಭಾರದಿಂದ ಬಂದ ವಸ್ತುಗಳನ್ನು ದೇವಸ್ಥಾನದ ಅರ್ಚಕರು ಮತ್ತು ಕಟ್ಟಿಗೆದಾರರು ಮತ್ತು ಗುನಗರಿಗೆ ಹಂಚಲಾಗುತ್ತದೆ. ಈ ಹರಕೆ ಸಂತಾನ ಮತ್ತು ಆರೋಗ್ಯದ ಆಶಯಗಳನ್ನು ಒಳಗೊಂಡಿದೆ. ಇಲ್ಲಿ ಬಳಕೆ ಆಗುವ ಫಲಗಳೂ ಪ್ರಾದೇಶಿಕವಾಗಿರುವುದು ಗಮನಾರ್ಹವಾಗಿದೆ.

**ದೀಪದ ಹರಕೆ**

ಈ ಹರಕೆಯನ್ನು ದೀಪದ ಸೇವೆ ಎಂದೂ ಕರೆಯುತ್ತಾರೆ, ಹಬ್ಬ ಜಾತ್ರೆ, ಉತ್ಸವಗಳಲ್ಲದೆ, ವೈಯಕ್ತಿಕವಾಗಿ ವಾರದ ಬಿಡಿದಿನಗಳಲ್ಲಿ ದೇವರಿಗೆ ವಿಶೇಷವಾದ 'ದೀಪದ ಹರಕೆ' ಒಪ್ಪಿಸುತ್ತಾರೆ. ಮೀಸಲು ತುಪ್ಪದ ದೀಪ, ಎಣ್ಣೆದೀಪ, ನಿಂಬೆಹಣ್ಣಿನ ದೀಪ ಮೊದಲಾದವುಗಳನ್ನು ದೇವಿಯರಿಗೆ ವಿಶೇಷವಾಗಿ ಪ್ರತಿ ಮಂಗಳವಾರ, ಶುಕ್ರವಾರ ಅರ್ಪಿಸುತ್ತಾರೆ.ನಿಂಬೆಹಣ್ಣನ್ನು ಸಮವಾಗಿ ಅರ್ಧಭಾಗ ಕತ್ತರಿಸಿ ರಸತೆಗೆದು ಸಿಪ್ಪೆಯನ್ನು ಹಿಂಡಿ ತಿರುಗಿಸಿ ಅದಕ್ಕೆ ಎಣ್ಣೆ ಬತ್ತಿ ಹಾಕಿ ದೀಪ ಹಚ್ಚುತ್ತಾರೆ, ಮಧ್ಯಾಹ್ನ 'ರಾಹುಕಾಲ' ಇರುವಾಗ ಈ ಹರಕೆ ನಡೆಸುವದು ವಿಶೇಷ. ಗ್ರಹಗತಿಗಳ ದೋಷ ನಿವಾರಣೆಗಾಗಿ, ಗ್ರಹದೋಷದ ಕಾರಣ ಹೆಣ್ಣುಮಕ್ಕಳ ವಿವಾಹಕ್ಕೆ ಅಡ್ಡಿಯ ನಿವಾರಣೆಗಾಗಿಯೂ ಹರಕೆ ದೀಪ ಹಚ್ಚುತ್ತಾರೆ. ಹರಕೆ ಹೊತ್ತಷ್ಟು ವಾರಗಳು ಆಚರಿಸುವದರಿಂದ ಮನೋಭಿಲಾಷೆ ಇಡೇರುವದೆಂಬ ನಂಬಿಕೆ ಇದೆ.

**ಮೀಸಲು ಹರಕೆ**

ಸಾಮಾನ್ಯವಾಗಿ ಕಷ್ಟಗಳು ಬಂದಾಗ, ಅನಾರೋಗ್ಯವುಂಟಾದಾಗ 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ದೇವರ ಹೆಸರಿನಲ್ಲಿ ಹರಕೆ ಹೊರುತ್ತಾರೆ, ಮೀಸಲು ಎಂದರೆ ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ದೇವರ ಹೆಸರಿನಲ್ಲಿ ಕಾದಿರಿಸಿದ ವಸ್ತು, ಮುಡಿಪು ಕಟ್ಟಿ ಇಡುವುದು, ಮುಡಿಪು ಎತ್ತಿಡುವದು ಎನ್ನುತ್ತಾರೆ. ಈ ಹರಕೆಗೆ ದೇವಾಲಯಕ್ಕೆ ಹೋಗಬೇಕಾಗಿಲ್ಲ. ಮನೆಯಲ್ಲಿಯೇ ಕಟ್ಟಿಟ್ಟು ಜಾತ್ರೆಯ ಸಂದರ್ಭದಲ್ಲಿ ' ದೇವರಿಗೆ ಅರ್ಪಿಸುತ್ತಾರೆ.

**ಮೀಸಲು ಕಟ್ಟಿಡುವದು**

ಮಡಿಯಿಂದ ಒಂದು ಶುಭ್ರ, ಬಟ್ಟೆಯಲ್ಲಿ ತಮಗೆ ತೋಚಿದ ನಾಣ್ಯವನ್ನು ಕಟ್ಟಿ ಅರಿಶಿಣ ಕುಂಕುಮ ಹಚ್ಚಿ ಇಷ್ಟದೇವತೆಯ ಹೆಸರಿನಲ್ಲಿ ಕಟ್ಟಿಟ್ಟು, ಜಾತ್ರೆ ಉತ್ಸವಗಳಿಗೆ ಹೋಗುವಾಗ ಒಯ್ದು ಹುಂಡಿಗೆ ಹಾಕುವರು, ಇಲ್ಲವೇ ದೇವರ ವಸ್ತು ಖರೀದಿಸಲು ಬಳಸುವವರು.ಇದೇ ರೀತಿ ಗ್ರಾಮೀಣ ಪ್ರದೇಶದಲ್ಲಿ ಹಸು, ಎಮ್ಮೆಗಳು ಆರ್ಯೋಗ್ಯದಗೋಸ್ಕರ ಈ ಹರಕೆ ಪ್ರಚಲಿತವಿದೆ

**ಬಾಳೆ ಪೂಜೆ ಹರಕೆ**

ದೇವರ ಜಾತ್ರೆ ಸಂದರ್ಭದಲ್ಲಿ ವಿಶೇಷ ಪೂಜೆಯ ಹರಕೆ ಹೇಳಿಕೊಂಡವರು ಬಾಳೆಯ ದಿಂಡಿನ ಒಂದೊಂದು ಪದರನ್ನು ದೇವರ ಮೂರ್ತಿಯ ಎದುರಗಡೆ ಅಲಂಕಾರ ಮಾಡಿ ಪೂಜೆ ಮಾಡಿ ಬಾಳೆಯ ಪೂಜೆ ಹರಕೆ ತೀರಿಸುತ್ತಾರೆ, ಈ ಜಿಲ್ಲೆಯ ಪರಿಸರದಲ್ಲಿ ಪ್ರಚಲಿತವಿರುವ ಹರಕೆಯಾಗಿದೆ.

**ಎಣ್ಣೆ ಜಳಕ**

ಜಾತ್ರೆ ಸಮಯದಲ್ಲಿ ಹರಕೆ ಹೇಳಿ ಕೊಂಡವರು ದೇವರ ಮೂರ್ತಿ ಎಣ್ಣೆ ಜಳಕ ಮಾಡಿಸಿ ಹರಕೆಯನ್ನು ತೀರಿಸುತ್ತಾರೆ ಈ ಹರಕೆಗಳನ್ನು ದೈಹಿಕವಗಿ ಬೆನ್ನು ನೋವು ಕೈ ನೋವು,ಸಂಧಿ ನೋವು ಇನ್ನಿತರ ದೈಹಿಕ ನೋವಿನ ಸಮಯದಲ್ಲಿ ಹೇಳಿಕೊಂಡ ಹರಕೆಯನ್ನು ಈ ಸಂದರ್ಭದಲಿ ತೀರಿಸುತ್ತಾರೆ.

**ಎಲೆ ಪೂಜೆಯ ಹರಕೆ**

ತಿಂಬಲೆ (ತಿನ್ನುವ ಎಲೆ,ವೀಳ್ಯೆದೆಲೆ)ಯನ್ನು ಕಾಮನ ಬಿಲ್ಲಿನ ಆಕಾರದಲ್ಲಿ ಬಿದಿರಗೆ ಕಟ್ಟುತ್ತಾರೆ. ಭಕ್ತರು ಹರಕೆ ಮಾಡಿಕೊಂಡಷ್ಟು ವೀಳ್ಯೆದೆಲೆಯನ್ನು ಸಿಕ್ಕಿಸುತ್ತಾರೆ ಹೀಗೆ ಭಕ್ತರು ಬೇಡಿಕೊಂಡಷ್ಟು ಎಲೆಗಳನ್ನು ಬಿದಿರಿನ ಕಮಾನಿನ ಸಂದುಗಳಲ್ಲಿ ಸಿಕ್ಕಿಸಿ ಶೃಂಗರಿಸುತ್ತಾರೆ. ಕೆಲವರು ವಿಳ್ಯೆದೆಲೆ ಜೊತೆ ಹೂವನ್ನು ಸೇರಿಸಿ ಅಲಂಕರಿಸಿರುತ್ತಾರೆ. ಈ ಅಲಂಕಾರದ ಪೂಜೆಯು ದೇವರ ವಿಗ್ರಹಕ್ಕೆ ಕಟ್ಟಿಡ ತೋರಣದಂತೆ ನೋಡಲು ಸುಂದರವಾಗಿರುತ್ತದೆ. ಈ ಜಿಲ್ಲೆಯ ಜಾತ್ರೆಗಳಲ್ಲಿ ಸಾಮಾನ್ಯವಾಗಿ ಮಾತೃದೇವತೆಗಳಿಗೂ ಈ ಹರಕೆಯ ಪೂಜೆ ಸಲ್ಲುತ್ತದೆ.ಆದರೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ.

**ಆಹಾರ ಮತ್ತು ಕೃಷಿ ಸಂಬಂಧ ಹರಕೆಗಳು**

ಭಾರತದ ಕೆಲವು ಪರಿಸರದಲ್ಲಿ ಕೃಷಿ ಜೀವನ ಇಂದಿಗೂ ಮುಖ್ಯ ಕಸುಬಆಗಿದೆ. ಕೃಷಿ ರೈತನ ಬದುಕನ್ನು ಹಸನಾಗಿಸುತ್ತದೆ. ಈ ಭೂಮಿಯ ಪರಮಾಧಿಕಾರ ಭೂ ದೇವತಿಗೆ ಸೇರಿದ್ದು. ಮತ್ತು ಭೂಮಿಯನ್ನು ಫಲವತ್ತುಗೊಳಿಸುವ ಶಕ್ತಿಯು ಭೂಮಿತಾಯಿಗಿದೆ. ಆದ್ದರಿಂದ ಸಮೃದ್ಧ ಫಸಲಿಗಾಗಿ ಮತ್ತು ರೋಗ– ಬಾಧೆಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಕೃಷಿಕ ಹರಕೆ ಹೊರುತ್ತಿದ್ದ ಎಂಬುದು ಜಾತ್ರೆಯಲ್ಲಿ ಸಲ್ಲಿಸುವ ಹಲವು ಹರಕೆಗಳಿಂದ ತಿಳಿದು ಬರುತ್ತದೆ.

**ಸಿವುಡು (ಬತ್ತದ ತೆನೆ) ಕೊಡುವುದು**

ಕರ್ನಾಟಕದ ಕರವಾಳಿ ಜಿಲ್ಲೆಯ ಪರಿಸರದಲ್ಲಿ ಪ್ರತಿ ಹಳ್ಳಿಯಲ್ಲಿಯೂ ಹೋಸ್ತು* ಎಂಬ ಹಬ್ಬ ಮಾಡುತ್ತಾರೆ ಅದೇರೀತಿ ಕಲಶವು ಹೊತ್ತಿನ ದಿನ ಎದ್ದು ಕಲಶಮನೆಯಲ್ಲಿ ಕುಳಿತಿರುವಾಗ ಗದ್ದೆಯ ಕದಿರನ್ನು ಕೊಯ್ದುತಂದು ಹೊಸ್ತಿನ ದಿನ ಗ್ರಾಮದ ಕೃಷಿಕರೆಲ್ಲ ತಮ್ಮ ತಮ್ಮ ಹೊಲಗಳಿಗೆ ಹೋಗಿ ಪೂಜೆ ಮಾಡಿ ಗದ್ದೆಯಲ್ಲಿಯ ಕದಿರನ್ನು ಕೊಯ್ಯುತ್ತಾರೆ. ನಂತರ ಕಲಶಕ್ಕೆ ತಂದು ಒಪ್ಪಿಸುತ್ತಾರೆ. ಗ್ರಾಮ ದೇವರ ಆರ್ಶೀವಾದ ಪಡೆಯವವುದು ಈ ಹರಕೆಯ ಉದ್ದೇಶವಾಗಿದೆ. ಭೂಮಿಯ ಮೊದಲ ಫಲವನ್ನು ದೇವರಿಗೆ ಮೀಸಲು ಮಾಡುವ ಆಶಯವೂ ಈ ಹರಕೆಯಲ್ಲಿ ಒಳಗೊಂಡಿದೆ.

**ಎತ್ತು ಓಡಿಸುವುದು**

ಹರಕೆ ಹೇಳಿ ಕೊಂಡವರು ದನಕರುಗಳು ಉಳುಮೆಯ ಸಂದರ್ಭದಲ್ಲಿ ತೊಂದರೆ ಉಂಟು ಮಾಡಿದ ಅಪಾಯಕಾರಿ ರೋಗಕ್ಕೆ ಒಳಗಾದ ಸಂದರ್ಭದಲ್ಲಿ ಎತ್ತುಗಳು ಸರಿಯಾದರೆ ಬಂಡಿಹಬ್ಬಜಾತ್ರೆ ದಿನ ಪ್ರಧಾನ ದೇವರ ಗುಡಿಯ ಸುತ್ತಲೂ ಎತ್ತುಗಳನ್ನು ಓಡಿಸುತ್ತಾರೆ.ಎತ್ತು ಓಡಿಸುವ ದಿನ ಮೈತೊಳೆಯಿಸಿ ಅಲಂಕಾರ ಮಾಡಿ ಹೂವಿನ ಮಾಲೆ ಹಾಕಿ ದೇವಸ್ಥಾನಕ್ಕೆ ತರುತ್ತಾರೆ. ಹಗಲ ಹಬ್ಬದ ದಿವಸ ದೇವರ ಮನೆಯಲ್ಲಿ ಗುನಗರು ಸೇಸೆ ಹೊಡೆಯುತ್ತಾರೆ. ಎತ್ತುಗಳಿಗೆ ಸೇಸೆ ಹೊಡೆದ ತಕ್ಷಣ ದೇವರ ಗುಡಿಯ ಸುತ್ತ ಪ್ರದಕ್ಷಿಣೆ ಹಾಕಿ ಮೂರು ಸುತ್ತು ತಿರುಗಿಸಿ ಕೊನೆಯ ಸುತ್ತಿನಲ್ಲಿ ಕೈಯಲ್ಲಿ ಹಿಡಿದಿರುವ ಕಾಯಿಯನ್ನು ನೆಲಕ್ಕೆ ಜೋರಾಗಿ ಹೊಡೆದು ಒಡೆಯುತ್ತಾರೆ. ದೇವರ ಪ್ರಸಾದ ಮುಡಿದು ಹೋಗುತ್ತಾರೆ. ಇಲ್ಲಿ ಎತ್ತುಗಳನ್ನು ಮಾತ್ರ ಬಳಸುವುದು ಕೃಷಿ ಆಶಯವನ್ನು ಈ ಹರಕೆ ಹೊಂದಿರುವುದು ತಿಳಿಸುತ್ತದೆ.

**ಹಣ್ಣು ಕಾಯಿಯ ಹರಕೆ**
ಇದರ ಹೆಸರೇ ಸೂಚಿಸುವಂತೆ ಯಾವ ಜಾತಿ–ಮತದ ತೊಡಕಿಲ್ಲದೇ ಸಲ್ಲುವ ಹರಕೆಯಾಗಿದೆ. ತನ್ನ ಹರಕೆ ಈಡೇರದಿದ್ದರೆ ದೇವರಿಗೆ ಹೋಗಿ ಹಣ್ಣು–ಕಾಯಿ ಮಾಡಿಸುತ್ತೇನೆ. ಜೋಡುಕಾಯಿ, ಬೆರೊಂದು ಕಾಯಿ ಒಡೆಸುತ್ತೇನೆ. ಎಂದು ಹರಕೆ ಹೊರುತ್ತಾರೆ.

**ಉಡಿ ತುಂಬುವ ಹರಕೆ**
ಸಾಮಾನ್ಯವಾಗಿ ಸ್ತ್ರೀ ದೇವತೆಗಳಿಗೆ ಮಡಿಲು ತುಂಬುವ 'ಹರಕೆ ಇದು. "ಉಡಿಯಕ್ಕಿ" "ಮಡಿಲಕ್ಕಿ " ಮಡಿಲು ತುಂಬುವದು ಎಂದರೆ ಬಳೆ, ಅರಿಷಿಣ, ಕುಂಕುಮ, ಬೆಲ್ಲ, ಅಕ್ಕಿ ತೆಂಗಿನಕಾಯಿ, ಹಣ್ಣು, ನೆನಸಿದ ಕಡಲೆಕಾಳು ಎಲೆ–ಅಡಿಕೆ. ನಾಣ್ಯ, ಉತ್ತತ್ತಿ, ಬೆಳ್ಳುಳ್ಳಿ ಮೊದಲಾದವುಗಳನ್ನು ಸೆರಗಿನ ಮಡಿಲಿಗೆ ತುಂಬುವದು. ಸ್ತ್ರೀ ದೇವತೆಗಳಿಗೆ ಈ ಹರಕೆ ಸಲ್ಲಿಸುವದು ಸಾಮಾನ್ಯ.

**ಶಿಕ್ಷಾ ಹರಕೆಗಳು**
ಹರಕೆ ಹೊತ್ತ ಭಕ್ತಾದಿಗಳೆ ತಮ್ಮ ದೇಹ ದಂಡಿಸಿ ಅರ್ಪಿಸುವ ಸೇವೆ ಇದು. ಇದರಲ್ಲೂ ದೈಹಿಕ ಹರಕೆ (ದೇಹ ದಂಡನೆಯ) ಮತ್ತು ಮಾನಸಿಕ ಹರಕೆ ಎಂದು ವಿಭಜಿಸಬಹುದು. ಉರುಳು ಸೇವೆ. ದೀಪ ನಮಸ್ಕಾರ, ಉಪವಾಸ, ಕೆಂಡದ ಹರಕೆ, ಸಿಡಿ ಮೊದಲಾದವು ದೈಹಿಕ ಶಿಕ್ಷಾಹರ್ಯ ಹರಕೆಗಳು. ಈ ಹರಕೆಗಳು ನಾನು ಗಮನಿಸಿದ್ದಂತೆ ಈಗ ಕಡಿಮೆಯಾಗಿದೆ.

**ಕೆಂಡದ ಸೇವೆಯ ಹರಕೆ**
ಜಾತ್ರೆ ಸಂದರ್ಭದಲ್ಲಿ ದೇವಾಲಯದ ಮಹಾದ್ವಾರದ ಮುಂದೆ ಅಥವಾ ಪಕ್ಕದಲ್ಲಿ ಹರಕೆ ಹೇಳಿಕೊಂಡವರು ಕೊಂಡ ಹಾಯುತ್ತಾರೆ. ಚೌಕಾಕಾರದ ಕೆಂಪಾಗಿ ಕಾದ ನಿಗಿ ನಿಗಿ ಕೆಂಡದ ಮೇಲೆ ಹರಕೆ ಹೊತ್ತವರು ಮಡಿಯಿಂದ ಬರಿಗಾಲಿನಲ್ಲಿ ಕೆಲವು ಹೆಜ್ಜೆ ನಡೆದು ಗುಡಿ ಪ್ರವೇಶಿಸುತ್ತಾರೆ. ಈ ಪದ್ಧತಿಯು ಸಾಮಾನ್ಯವಾಗಿ ತಾಲೂಕಿನ ಸ್ತ್ರೀ ದೇವತೆಗಳ ಜಾತ್ರೆಯಲ್ಲಿ ಈ ಹರಕೆ ಸಂದಾಯವಾಗುತ್ತದೆ. ಕೆಂಡದ ನಡಿಗೆ, ಹರಕೆ ಎಂದೂ ಕೂಡಾ ನಂಬಿಕೆಯಾಗಿದೆ. ಜನಪದರೆ ಮಾತಿನಲ್ಲಿ "ಕೊಂಡ ಹಾಯುವದು ಎಂದಾಗಿದೆ.ಇತ್ತಿಚೆಗೆ ಈ ಹರಕೆಗಳ ಸಾಕೇಂತಿಕ ರೂಪದಲ್ಲಿ ನಡೆಯುತ್ತವೆ,ಮಾಹಸತಿ ಕೆಂಡ ಹಾಯವುದು ಈಗಲೂ ಪ್ರಚಲಿತವಿದೆ.

**ಉರುಳು ಸೇವೆ**
ಈ ಸೇವೆಯ ಹರಕೆ ಹೊತ್ತವರು ಸ್ನಾನ ಮಾಡಿ ಮಡಿಯಿಂದ ಬಟ್ಟೆ ಉಟ್ಟು ದೇವಾಲಯದ ಪ್ರಾಕಾರದ ಮುಂಬಾಗಿಲಿನ ಬಲ ತುದಿಯಿಂದ ಉರುಳುತ್ತಾ ಪ್ರದಕ್ಷಿಣೆ ಆರಂಭಿಸಿ ಮತ್ತೆ ಹೆಬ್ಬಾಗಿಲಿಗೆ ಬರುತ್ತಾರೆ. ಮರದ ದಿಂಡನ್ನು ಊರುಳಿಸಿದ ಮಾದರಿಯಲ್ಲಿ ದೇಹವನ್ನು ಬಲತುದಿಯಿಂದ ಉರುಳಿಸಿಸಂಕಲ್ಪಿತ ಸ್ಥಳ ತಲುಪುವುದು. ಇದನ್ನು "ದಿಂಡುರುಳು ಸೇವೆ" ಎಂದೂ ಕರೆಯುತ್ತಾರೆ. 'ಈ ರೀತಿ ಪ್ರಾಂಗಣ ದೊಡ್ಡದಿದ್ದರೆ ಒಂದು ಸುತ್ತು. ಚಿಕ್ಕದಿದ್ದರೆ ಮೂರು ಮತ್ತು ಸಂಕಲ್ಪಿಸಿದಂತೆ ಸೇವೆ ಸಲ್ಲಿಸುವುದು ಒಂದು ಬಗೆಯಾದರೆ ಒಂದು ಸುತ್ತು, ಚಿಕ್ಕದಿದ್ದರೆ ಮೂರು ಸುತ್ತು ಸಂಕಲ್ಪಸಿದಂತೆ ಸೇವೆ ಸಲ್ಲಿಸುವದು ಒಂದು ಬಗೆಯಾದರೆ ಜಾತ್ರೆಯ ದಿನ "ಉರುಳು ಸೇವೆ" ಮಾಡುತ್ತೇನೆಂದು ಹರಕೆ ಹೊತ್ತವರು ದೇಗುಲ ಸುತ್ತಿ ಪ್ರದಕ್ಷಿಣೆ ಹಾಕಿ ಊರುಳು ಸೇವೆ ಮಾಡುತ್ತಾರೆ.

**ದಿ0ಡು ನಮಸ್ಕಾರ**
ದೇವಸ್ಥಾನದ ಪ್ರಾಂಗಣದಲ್ಲಿ ಗುಡಿಯ ಸುತ್ತ ಒದ್ದೆ ಬಟ್ಟೆಯುಲ್ಲಿ ದೇಹವನ್ನು ಬಲಕ್ಕೆ ಉರುಳುವದು ಎಂದರೆ ನಮಸ್ಕಾರ ಸಲ್ಲಿಸುವ ಹರಕೆಯಾಗಿದೆ. ಹತ್ತಿರದ ಕೆರೆ, ಹೊಳೆ, ಹಳ್ಳ ಹೊಂಡ ನದಿಯಿಂದ ಸ್ನಾನ ಮಾಡಿ ಒದ್ದೆ ಉಡುಗೆಯಲ್ಲಿ ದೇವರ ನಾಮಸ್ಮರಣೆ ಮಾಡುತ್ತಾ ಸಾಷ್ಟಾಂಗ ಹಾಕಿ ಕೈಕೋಲಿನಿಂದ ಕ್ರಮಿಸಿದ ಸ್ಥಳವನ್ನು ಗೀರು ಹಾಕಿ ಮತ್ತೆ ಎದ್ದು ಮುಂದುವರಿಯುತ್ತಾನೆ. ಹೀಗೆ ನಿಗದಿತ ಹರಕೆಯ ಸ್ಥಳದವರೆಗೆ ತಲುಪುತ್ತಾನೆ. ನಂತರ ಪವಿತ್ರ ಸ್ನಾನ ಮಾಡಿ ನಂತರ ಭಕ್ತನ ಹಾಸಿದ ಕಂಬಳಿಯ ಮೇಲೆ ಕೂರಿಸಿ ಬಂಧುಗಳು, ತಂದೆ–ತಾಯಿ, ಪತ್ನಿ ಹೂ ಸೇಸೆ ಹಾಕಿ, ಆರತಿ ಬೆಳಗಿ ಉಡುಗೋರೆ ಕೊಡುತ್ತಾರೆ. ಇಲ್ಲಿಗೆ ಹರಕೆಯ ವಿಧಿ ಮುಕ್ತಾಯವಾದಂತೆ. ಕೆಲವರು ದೇಗುಲದ ಆವರಣದಲ್ಲಷ್ಟೇ ನಮಸ್ಕಾರ ಹಾಕುತ್ತಾರೆ.

**ಬೇವಿನುಡುಗೆ ಸೇವೆ**
ವಿಶೆಷವಾಗಿ ಮಾರಿ ಜಾತ್ರೆಗಳಲ್ಲಿ ಕಂಡು ಬರುವ ಈ ಹರಕೆ ಹೊತ್ತು ಕೊಂಡವರು ಬೇವಿನ ಸಣ್ಣ ಸಣ್ಣ ಟೊಂಗೆಗಳನ್ನು ದಾರದಿಂದ ಕಟ್ಟಿ ತಟ್ಟು ತಯಾರಿಸುತ್ತಾರೆ. ಎದೆಯಿಂದ ಮೊಣಕಲಿನ ಭಾಗದವರೆಗೆ ಕಟ್ಟಿ ದೇವಿಯ ಗುಡಿಯವರೆಗೆ ಹೋಗಿ, ಅಲ್ಲಿ ಒಂದು ಬಿಂದಿಗೆ ನೀರು ಹಾಕಿಸಿ ಹೊಸಬಟ್ಟೆ ಧರಿಸುವ ಬದಲು ಬೇವಿನ ಸೊಪ್ಪು ಬಳಸುವುದರಿಂದ "ಬೇವುಡುವದು." "ಬೇವಿನ ಉಟಗಿ" ಎನ್ನುತ್ತಾರೆ.ಈ ಬೇವಿನ ಉಡುಗೆ ಹರಕೆಯ ವೃಕ್ಷ ದೇವತಾರಾಧನೆಯ ರೂಪವೇ ಆಗಿದೆ. ಜಾತ್ರೆ, ಹಬ್ಬಗಳಲ್ಲಿ ಹರಕೆ ಮಾಡಿಕೊಂಡವರು ಮನೆಯಿಂದಲೇ ಗುಡಿಯವರೆಗೂ ಬೇವಿನುಡುಗೆ ಧರಿಸಿ, ಕೈಯಲ್ಲಿ ಬೇವಿನಸೊಪ್ಪು ಹಿಡಿದು ವಾದ್ಯದೊಂದಿಗೆ, ಹಾಸಿದ "ಹಡದಿ" ಮೇಲೆ ನಡೆಯುವ ಸಂಪ್ರದಾಯದ ಹರಕೆ

**ಗಂಧದ ಸೇವೆ**
ತೇಯ್ದು ಗಂಧವನ್ನು ಬೆತ್ತಲು ಮೈಗೆ ಲೇಪಿಸುವದು ಗಂಧದ ಉಟಗಿ ಸೇವೆಯಾದರೆ, ಕೆಲವರು ಅರಿಶಿಣ ತೇಯ್ದು ಮೈಗೆ ಲೇಪಸಿಕೊಂಡು ಪ್ರದಕ್ಷೀಣೆ ಹಾಕಿದರೆ ಗಂಧದ ಸೇವೆ' ಎಂದೆನೆಸಿಕೊಳ್ಳುತ್ತದೆ. ಈ ಪದ್ದತಿ ನಾನು ಗಮನಿಸಿದ್ದಂತೆ ಈಗ ಅಪರೂಪವಾಗಿದೆ.

**ಒದ್ದೆ ಉಡುಗೆ ಸೇವೆ**
ದೇವಾಲಯದ ಬಳಿ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಉಧೋ, ಊಧೋ, ಉಘೇ ಎನ್ನುತ್ತ ಗುಡಿಯವರೆಗೆ ಭಾವಾವೇಶದಿಂದ ಹರಕೆ ಕಟ್ಟಿಕೊಂಡು ಭಕ್ತರು ಮಾಡುವ ಸೇವೆ– " ಒದ್ದೆ ಉಡುಗೆ ಸೇವೆ" ಆಗಿದೆ. ಸಾಮಾನ್ಯವಾಗಿ ಈ ಮೈಗೆ ಉಡುವ, ಧರಿಸುವ, ಲೇಪಿಸುವ ಸೇವಾ ಹರಕೆಗಳೆಲ್ಲವೂ ಹೆಚ್ಚಾಗಿ ದೇವಿಯರಿಗೆ ಸಂಬಂಧಿಸಿದ ಹರಕೆಗಳಾಗಿವೆ. ಈ ಬಗೆಯ ಹರಕೆಗಳನ್ನು ನೋಡಿದಾಗ ಪ್ರಾಚೀನ ಕಾಲದ ಮಾನವ ನಾಗರಿಕನಾಗುತ್ತ ಬಂದ ಬಗೆಯನ್ನು ಮತ್ತು ಆತನ ಬದುಕಿನ ಸ್ಥಿತ್ಯಂತರ ರೂಪಗಳನ್ನು ಈ ಉಡುಗೆಯ ಹರಕೆಗಳು ತಿಳಿಸುತ್ತವೆ.

**ಸಿಡಿಯಾಡುವದು**
ಕರವಾಳಿ ತಾಲೂಕಿನಲ್ಲಿ ಕಲಶ ಜಾತ್ರೆಯ ಸಮಯದಲ್ಲಿ ಬಲಿಮಕ್ಕಳು ಈ ಹರಕೆಯನ್ನು ಸಲ್ಲಿಸುತ್ತಾರೆ ಇದೊಂದು ವಿಶಿಷ್ಟ ಹರಕೆಯ ಆಚರಣೆಯಾಗಿದ್ದು, ಈಗ ಎಲ್ಲೆಡೆ ಪ್ರಚಲಿತವಿಲ್ಲ. ಸಿಡಿ ಹರಕೆ ಹೊತ್ತವನ ಬೆನ್ನಿಗೆ 'ಕಬ್ಬಿಣದ ಗಾಳ' ಚುಚ್ಚಿ ಅಡ್ಡಕೋಲಿಗೆ ನೇತು ಹಾಕಲಾಗುತ್ತದೆ. ಆ ಅಡ್ಡಕೋಲಿನಲ್ಲಿ ನೇತಾಡುತ್ತ ತಾನು ಹೊತ್ತ ಹರಕೆ ಮಾಡಿಕೊಂಡಷ್ಟು ಸುತ್ತು ಸುತ್ತುತ್ತಾನೆ, ಸಿಡಿಯಾಡುವ ಪೂರ್ವದಲ್ಲಿ ಆತನು ತಾನು ಹೊತ್ತ ಹರಕೆ ಮತ್ತು ಅದರ

ಫಲವನ್ನು ಪ್ರಕಟಿಸಬೇಕು. ಈ ಸಿಡಿ ಹರಕೆ ಎಲ್ಲ ಕಡೆಯಲ್ಲಿ ಇರುವುದಿಲ್ಲ. ಈ ಸೇವೆ ಈಗ ನಿಷೆದವಿದೆ ಈ ಪದ್ದತಿಯನ್ನು ಸಾಂಕೇತಿಕವಾಗಿ ಆಚರಿಸಲಾಗುತ್ತದೆ.

**ಚೌಲದ ಸೇವೆ**

ಜಾತ್ರಾ ಸಂದರ್ಭದಲ್ಲಿ ದೇವ ದೇವತೆಗಳನ್ನು ಕುಲದೇವತೆಯಾಗಿ ಆರಾಧಿಸುವವರು ಕುಲದೇವತೆಗೆ ಹರಕೆಯ ಫಲವಾಗಿ ಹುಟ್ಟಿದ ಮಕ್ಕಳ ಜವುಳ–ಹುಟ್ಟು ಕೂದಲನ್ನು ತೆಗೆಸುವುದಾಗಿ ಹರಕೆ ಮಾಡಿಕೊಂಡಿರುತ್ತಾರೆ. ಇದಕ್ಕೆ “ಮುಡಿಒಪ್ಪಿಸುವದು” “ಮುಡಿಕೊಡು” ಎಂದೂ ಕರೆಯುತ್ತಾರೆ,

ಬಲಿಮಕ್ಕಳು

ಹಿಂದುಳಿದ ವರ್ಗದವರ ಹೆಚ್ಚಾಗಿ ಹರಕೆಗಾಗಿ ಬಲಿ ಮಕ್ಕಳಾಗಿರುವದು ನನ್ನ ಕ್ಷೇತ್ರ ಕಾರ್ಯ ಸಮಯದ್ದಲ್ಲಿ ಕಂಡು ಬಂತು .ಇವರೆಲ್ಲಾ ಒಂದಲ್ಲ ಒಂದು ಅಂಧ ಶೃದ್ದೆಯಿಂದ ಬಲಿ ಮಕ್ಕಳಾಗಿರುವುದು ಕರಾವಳಿ ತಾಲೂಕಿನ ಕಲಶ ಜಾತ್ರೆಯಲ್ಲಿ ಬಲಿ ಮಕ್ಕಳ ಹರಕೆ ಸಂದಾಯ ಮಾಡುವಾಗ ಕಂಡು ಬಂತು.ಕೆಂಪು ಹೂವಿನ ಮಾಲೆಯನ್ನು ಕೊರಳಿಗೆ ಹಾಕಿ ಕೊಂಡು ಕೆಲವು ಹರಕೆಗಾಗಿ ಬಲಿ ಮಕ್ಕಳು ಆಗಿದ್ದಾರೆ, ಕೆಲವರು ವಂಶ ಪಾರಂಪಾರ್ಯವಾಗಿ ಬಲಿ ಮಕ್ಕಳು ಆಗುತ್ತಿದ್ದರು.ಪ್ರಾಚೀನ ಕಾಲದಲ್ಲಿ ಬಂಡಿಯ ಕೊಕ್ಕೆಗೆ ಬೆನ್ನ ಹುರಿಯ ಚರ್ಮಕ್ಕೆ ಸಿಕ್ಕಿಸಿ ಹರಕೆ ಒಪ್ಪಿಸುತ್ತಿದ್ದರು ಎಂದು ಅಂಕೋಲಾ ಬಿಡು ಗುನಗ ನೀಲಪ್ಪನವರ ನನ್ನ ಬಳಿ ಹೇಳಿದ್ದರು

**ಬಲಿಯ ಹರಕೆಗಳು**

ಜಾತ್ರೆಯ ಸಂದರ್ಭದಲ್ಲಿ ಪರಿವಾರ ದೇವತೆಗಳಿಗೆ (ಹೀರೆ ಹೋನ್ನಪ್ಪ) ಕುರಿ, ಕೋಳಿ, ಮೇಕೆ, ಕೋಣ ಮೊದಲಾದ ಪ್ರಾಣಿಗಳನ್ನು ಆಯಾ ಪ್ರದೇಶದ ಪದ್ಧತಿಗೆ ಅನುಗುಣವಾಗಿ ಬಲಿಕೊಡುವ ಪದ್ಧತಿಯ ಭಾರತದಾದ್ಯಂತ ಪ್ರಚಲಿತವಿದೆ. ಇಂದಿನ ಆಧುನಿಕ ದಿನಗಳಲ್ಲೂ ಇಂತಹ ನಂಬಿಕೆ ಮತ್ತು ಆಚರಣೆಗಳು ಸುಲಭದಲ್ಲಿ ಬದಲಾಗುವು. ಮಾಂಸವನ್ನು ಆಹಾರವಾಗಿ ಸ್ವೀಕರಿಸುವ ಜನಾಂಗ ದೇವಿಗೆ ಅರ್ಪಿಸಿದ ಬಲಿ ಪ್ರಾಣಿಯ ಮಾಂಸವನ್ನು ಪ್ರಸಾದವಾಗಿ ಸ್ವೀಕರಿಸುವ ಪದ್ಧತಿ ಎಲ್ಲೆಡೆ ಇದೆ. ಮಾಂಸಾಹಾರಿಗಳು ಪ್ರಾಣಿ ಬಲಿ ಕೊಡುತ್ತಾರೆ. ಶಾಖಾಹಾರಿಗಳು ಶಾಖಾಹಾರ ಬಲಿ ಕೊಡುತ್ತಾರೆ..

ಅದೇ ರೀತಿ, ತೆಂಗಿನಕಾಯಿ ಒಡೆಯುವದು. ಕುಂಬಳಕಾಯಿ ಒಡೆಯುವದು, ನಿಂಬೆಹಣ್ಣನ್ನು ಕತ್ತರಿಸುವದು, ನಿವಾಳಿಸುವದು. – ಇವುಗಳಲ್ಲಿರುವ ಶಕ್ತಿಯನ್ನು ಆಕುಂಚನಗೊಳಿಸಿ ಭಗವಂತನಿಗೆ ಅರ್ಪಿಸುವದು, ಇದೂ ಕೂಡ ಅರ್ಪಣೆಯ ಹೆಸರಿನಲ್ಲಿ ಬಲಿಯ ರೂಪಾಂತರವೇ ಆಗಿದೆ ಶಾಖಾಹಾರಿಗಳಲ್ಲಿ . ಶಾಖಾಹಾರದ ಎಡೆ ಅರ್ಪಿತವಾಗುವ ಶಿಷ್ಟ ದೇವರುಗಳು ಕೂಡ ಬ್ರಹ್ಮರಥೋತ್ಸವದ ದಿನ ಮಹಾಬಲಿ ಪೂಜೆಯಲ್ಲಿ ಬೂದು ಕುಂಬಳಕಾಯಿ ಒಡೆದು ಹೋಳುಗಳಿಗೆ ಗಾಢವಾಗಿ ಕಾಣಲು ಕುಂಕುಮ ಹಾಕಿರುತ್ತಾರೆ. ಅದೇ ರೀತಿಕುಂಕುಮ ಬೆರೆಸಿದ ಅನ್ನವನ್ನು ಅರ್ಪಿಸುವದು, (ಮಹಾನವಮಿ ಆಯುಧ ಪೂಜೆಗೂ ಕುಂಬಳಕಾಯಿ ಬಲಿಗೆ ಕುಂಕುಮ ಲೇಪನವಿರುತ್ತದೆ). – ಇವೆಲ್ಲವನ್ನು ನೋಡಿದಾಗ ಶಿಷ್ಟರ ಪ್ರಾಣಿಬಲಿಯೇ ಕ್ರಮೇಣ ಬಲಿಯ ಬೇರೆ ಬೇರೆ ರೂಪಾಂತರಗಳಾಗಿದ್ದು, ಕೆಂಪು ಬಣ್ಣ ಕಂಡಾದರೂ ಬಲಿ ನೀಡಿದ ಮಾನಸಿಕ ಸಮಾಧಾನ ದೊರಕಿಸಿಕೊಂಡಂತಿದೆ. ಶೂದ್ರರು ಮತ್ತು ದಲಿತರು ಮಾತ್ರ ಪ್ರಾಣಿ ಬಲಿಯನ್ನು ಕೊಡುತ್ತಾ ಬಂದಿದ್ದಾರೆ.

ರಕ್ಷಣಾ ಸಂಬಂಧಿ ಹರಕೆಗಳು

ಹಿಂದಿನ ಕಾಲದಲ್ಲಿ ತಮ್ಮ ಪ್ರದೇಶಗಳ ಗಡಿ ರಕ್ಷಣೆಗಾಗಿ ವೀರರು ಗ್ರಾಮ ದೇವತೆಯ ಆದೇಶದಂತೆ ಗಡಿ ಕಾವಲು ನಡೆಸುತ್ತಿದ್ದರು ಅದಕ್ಕಾಗಿ ಬೇರೆ ಬೇರೆ ಪ್ರದೇಶಗಳಿಂದ ಕುದುರೆಗಳನ್ನು ಬಾಡಿಗೆ ತರುವ ಪದ್ದತಿಯಿತ್ತು ಎಂದು ಸ್ಥಳಿಯರು ಹೇಳುತ್ತಾರೆ. ವರ್ಷಕ್ಕೆ ಒಂದು ಸಲ ಬಂದು ತಾವು ಒಯ್ದ ಕುದುರೆಯನ್ನು ಹಿಂತಿರುಗಿಸುವ ಕ್ರಮ ಇರುವುದರಿಂದ ಅದರ ಸಾಂಕೇತಿಕ ಆಚರಣೆ ಎನ್ನುವ ರೀತಿಯಲ್ಲಿ ಅಂಕೋಲಾದ ವಾಸರೆ ಕುದುರೆಗಿಯ ಶಾಂತಿಕ ಪರಮೇಶ್ವರಿ ಕಾರವಾರದ ಶಿರವಾಡ ಬಾಂಡಿಸಿಟ್ಟಾ ಬಂಡಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಮಣ್ಣಿನಿಂದ ಮಾಡಿದ ಕುದುರೆಯ ಮೇಲೆ ಕುಳಿತ ಯೋಧನ ಮೂರ್ತಿಯನ್ನು ದೇವರಿಗೆ ಅರ್ಪಿಸುತ್ತಾರೆ. ಇದರ ಸಾಂಕೇತಿಕ ಅರ್ಥ ಪ್ರಾಚೀನ ಕಾಲದ ವೀರರ ಹೋರಾಟ, ಭೌಗೋಳಿಕ ಗಡಿ ರಕ್ಷಣೆ,ಯ ಮಹತ್ವವನ್ನು ತಿಳಿಸುಕೊಡುತ್ತದೆ.

ಇನ್ನಿತರ ಹರಕೆ

**ಹೂವಿನ ಹಾರದ ಹರಕೆ**

ಭಕ್ತರು ಹರಕೆ ಮಾಡಿಕೊಂಡಂತೆ ದೇವರಿಗೆ ಹೂಮಾಲೆ ಅರ್ಪಿಸುವ ಹರಕೆ ಅದೇ ರೀತಿ ತುಳಸಿಹಾರ, ಬಿಲ್ವ ಪತ್ರೆ, ಹಾರಗಳು ಸಲ್ಲುತ್ತವೆ. ಕೆಲವು ಭಕ್ತರು ಇಷ್ಟಾರ್ಥ ಸಿದ್ದಿಸಿದ ಮೇಲೂ ನಿರಂತರ ಹೂಮಾಲೆಯ ಸೇವೆ ಸಲ್ಲಿಸುವ ಹರಕೆ: ಹೊತ್ತಿರುತ್ತಾರೆ.

ಕುಂಕುಮಾರ್ಚನೆ ಹರಕೆ:

ಈ ಜಿಲ್ಲೆಯ ಜಾತ್ರೆಗಳಲ್ಲಿ ಭಕ್ತರು ದೇವಲಾಯದಲ್ಲಿ ಕುಂಕುಮಾರ್ಚನೆಯ ಹರಕೆ ತೀರಿಸುತ್ತಾರೆ ಸಾಮಾನ್ಯವಾಗಿ ಮಾತೃದೇವತೆಗಳಿಗೆ ಈ ಹರಕೆ ಸಲ್ಲುತ್ತದೆ. ದೇವಿ ವಿಗ್ರಹಕ್ಕೆ ಪೂರ್ತಿ ಕುಂಕುಮ ಲೇಪನ ಮಾಡಿ ಹರಕೆ ತೀರಿಸಲಾಗುತ್ತದೆ.

**ಬೆಣ್ಣೆ ಪೂಜೆ ಹರಕೆ**

ಶುದ್ದ ಬೆಣ್ಣೆಯಿಂದ ದೇವರನ್ನು ಅಲಂಕರಿಸಿ ಹರಕೆ ತೀರಿಸುವದಕ್ಕೆ ಬೆಣ್ಣೆ ಪೂಜೆ ಹರಕೆ ಎಂದು ಕರೆಯುತ್ತಾರೆ ಇದರಲ್ಲೂ ಪ್ರಸಾದ ರೂಪದಲ್ಲಿ ಬೆಣ್ಣೆಯನ್ನು ಕೊಡುತ್ತಾರೆ . ಕರಾವಳಿ ತಾಲೂಕಿನಲ್ಲಿ ಬಂಡಿ ಹಬ್ಬದ ಜಾತ್ರೆಗಳಲಿ ಮಾತ್ರ ದೇವತೆಗೆ ಈ ಹರಕೆ ಸಲ್ಲುತ್ತದೆ. ಇತ್ತೀಚೆಗೆ ಬ್ರಾಹ್ಮಣ ಅರ್ಚಕ ಪೂಜೆ ಮಾಡುವ ಶಿಷ್ಟ ಮತ್ತು ಜನಪದ ದೇವತೆಗಳಿಯಿರುವ ಪ್ರದೇಶಗಳಿಗೂ ಈ ಪೂಜೆ ನಡೆಯುತ್ತದೆ.

ಹರಕೆ ಆಚರಣೆಗಳ ಮೂಲಕ ದೇವರ ಒಲಮೆಗೊಳಿಸಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನರು ನಡೆಸುತ್ತಾ ಬಂದ ಹಲವು ಬಗೆಯ ಆಚರಣೆಗಳಿಗೆ ಹರಕೆ ಮೂಲ ಕಾರಣ. ಹರಕೆ ನಿತ್ಯದ ‘ಪಾರ್ಥನೆ’ ಯಿಂದ ಭಿನ್ನವಾದದು ಹಾಗೂ ವಿಶಿಷ್ಟವಾದದು. ನಿತ್ಯದ ಬಹುಪಾಲು ವೈಯಕ್ತಿಕವಾಗಿರುತ್ತದೆ. ಹರಕೆಯಲ್ಲಿ ವೈಯಕ್ತಿಕ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೇ ಕೌಟುಂಬಿಕ ಹಿತ ಮುಖ್ಯವಾಗಿರುತ್ತದೆ. ಎನ್ನಬಹುದು.

ಇನ್ನೂ ಜಾತ್ರೆಯ ವಿವಿಧ ಹರಕೆ, ನೈವೇಧ್ಯ, ಆಚರಣೆಗಳ ಹಿನ್ನಲೆಯಲ್ಲಿರುವ ಅರ್ಥವೇನು? ಉದಾಹರಣೆಗೆ, ತೇರು ಎಳೆಯುವಾಗ ಬಾಳೆಹಣ್ಣು ಉದ್ಬತ್ತಿ ಎಸೆಯುವ ಸಂಪ್ರದಾಯ ವ್ಯಾಪಕವಾಗಿದೆ. ಕೆಲವು ವಿದ್ವಾಂಸರ ಪ್ರಕಾರ ಬಾಳೆಹಣ್ಣು ಉದ್ಬತ್ತಿ ಮೊದಲಾದವನ್ನು ಶಿಶ್ನ ಸಂಕೇತವೆಂದು ಭಾವಿಸಬಹುದು. ಕಬ್ಬು ಇದೇ ಅರ್ಥದಲ್ಲಿ ಗಮನಿಸಬಹುದು. ಈ ಸಂಪ್ರದಾಯದ ಹಿಂದೆ ಫಲವಂತಿಕೆಯ ಉದ್ದೇಶವಿರಬಹುದೇ? ಬ್ರಹ್ಮಚಾರಿ ದೇವತೆಯಾದ ಹನುಮಂತನ ಜಾತ್ರೆಗಳಲ್ಲಿ ಈ ಆಚರಣೆ ಇರುವುದೇ ? ಕೆಲವೊಂದು ದೇವರುಗಳಿಗೆ ಪಾದುಕೆಗಳನ್ನರ್ಪಿಸುವ ಹರಕೆಯಿದೆ. ಪಾದುಕೆ ,ಸ್ತ್ರೀ ಜನನಾಂಗದ ಸಂಕೇತ. ಇಂತಹ ಹರಕೆ ಸ್ವೀಕರಿಸುವ ದೇವರುಗಳು ಯಾರು? ಈ ಎಲ್ಲವೂ ಹರಕೆಗಳ ಕುರಿತು ಹೊಸ

ದಿಕ್ಕನಲ್ಲಿಆಲೋಚನೆಗೆ ಮಾಡಬಹುದ್ದು.

ನಿರ್ದಿಷ್ಟವಾದ ಕೆಲವೊಂದು ಹರಕೆಗಳಿಗೂ ಅದರ ಕಥೆಗೂ ಸಂಬಂಧವಾದ ನೇರ ಸಂಬಂಧವಿದೆಯೇ? ಮಾರಮ್ಮನ ಜಾತ್ರೆಯಲ್ಲಿ ಕೋಣಬಲಿ, ಕುರಿಬಲಿಗಳಿಗೆ ಸಂಬಂಧಿಸಿದಂತೆ ಹೇಳುವ ಕಥೆಯನ್ನು ಗಮನಿಸಬಹುದು. ಆಯಾ ದೇವರಿಗೂ ಅವುಗಳಿಗೆ ಸಲ್ಲುವ ಹರಕೆಗಳಿಗೂ ದೇವರಿಗೂ 'ಇರುವ ಸಂಬಂಧವೇನು? ಏನಾದ್ದರೂ ಒಳರ್ಥಾವಿದೆಯೆ? ವಿಶ್ಲೇಷಣೆ ಮಾಡಬೇಕು.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಆಧುನಿಕತೆ ತಾಂಡವಾಡುತ್ತಿದ್ದರೂ ಹರಕೆ –ಆಚರಣೆ–ಸಂಪ್ರದಾಯಗಳಿಗೇನೂ ಕೊರತೆಯನ್ನು ಇಲ್ಲ. ಇನ್ನು ಕೆಲವು ಜಾತಿಯ ಭಕ್ತಿಪೂರ್ಣ ಹರಕೆಯೂ ನಡೆಯುವುದು, ಕೆಲವ ಜಾತ್ರೆಗಳಲ್ಲಿ ಬಂದ ಭಕ್ತರಿಗೆ ಮಜ್ಜಿಗೆ, ಲಿಂಬು ಪಾನಕ ಹಂಚುವುದು, ಹಾಲಕ್ಕಿಗಳು ಹಾಡಿನ ಸೇವೆ, ಕೀಳು ದೇವತೆಗಳಿಗೆ ಭಂಗಿ ಮತ್ತು ಹೆಂಡ ಒಪ್ಪಿಸುವುದು ಉಂಟು. ಇದು ಜಾತ್ರೆಯಲ್ಲಿ ಪಾಲ್ಗೊಳ್ಳುವ ಭಕ್ತರ ಹರಕೆಗಳು ಆಳವಾದ ಅಧ್ಯಯನ ಹೊಸ ಹೊಸ ಸಂಶೋಧನೆಗಳಿಗೆ ವಸ್ತು ವಾಗಬಲ್ಲದು.

## ಗ್ರಂಥ ಋಣ


1. ಡಾ. ಲಕ್ಷ್ಮೀ ದೇವಿ, ಗ್ರಾಮ ಮತ್ತು ಶಿಷ್ಟ ದೇವತೆಗಳು,ಚಿತ್ಕಲಾ ಪ್ರಕಾಶನ–ಕುಪ್ಪಂ 2007
2. ಡಾ. ಬಿ. ಎಸ್. ಶೇಠ ಕರ್ನಾಟಕದಲ್ಲಿ ಸತಿ ಪದ್ಧತಿ– 1991.
3. ಅಮೃತ ಸೋಮೇಶ್ವರ ಭಗವತಿ ಆರಾಧನೆ ಪ್ರಕೃತಿ ಪ್ರಕಾಶನ, ಕೋಟೇಕಾರು ದ.ಕ. 1998.
4. ಗಿರಿಜಮ್ಮ ಡಿ.ಎ.: ಕರ್ನಾಟಕದ ಜಾತ್ರೆಗಳು
5. ಕರ್ನಾಟಕಜಾನಪದಹಾಗೂ 1995 ಯಕ್ಷಗಾನ ಅಕಾಡೆಮಿ, ಬೆಂಗಳೂರು
6. ಚಿದಾನಂದ ಮೂರ್ತಿ.ಎಂ ಪರಗಣ ಮತ್ತು ಇತರ ಸಂಪ್ರಬಂಧಗಳು 1984 ಪುಸ್ತಕಚಿಲುಮೆ,ಮೈಸೂರು.
7. ಜೋಷಿ ಎ. ಸಿ.: ಅಂಕೋಲ ತಾಲೂಕು ದರ್ಶನ 1984 ಐಬಿಎಚ್. ಪ್ರಕಾಶನ, ಬೆಂಗಳೂರು
8. ನಾಯಕ ಎನ್. ಆರ್. :ಕರಾವಳಿ ಸೋಗುಗಳ ಬಹುರೂಪ, ಜಾನಪದ ಪ್ರಕಾಶನ, ಹೊನ್ನಾವರ 1998
9. ನಾಯಕ ಎನ್. ಆರ್. ಕಾರವಾರ ಜಿಲ್ಲೆಯ ಜಾನಪದ ಗೀತೆಗಳು ಪ್ರಸಾರಾಂಗ,ಕರ್ನಾಟಕವಿಶ್ವವಿದ್ಯಾಲಯ,ಧಾರವಾಡ. 1982.
10. ನಾಯಕ ಎನ್ ಆರ್ :ಉತ್ತರ ಕನ್ನಡ ಜಿಲ್ಲೆಯ ಗ್ರಾಮ ದೇವಗಳ ಹಾಡುಗಳು ಜಾನಪದ ಪ್ರಕಾಶನ, ಹೊನ್ನಾವರ 2002
11. ನಾಯಕ ಶಾಂತಿ: ಜಟಗಾ, ಮಾಸ್ತಿ ಜಾನಪದಪ್ರಕಾಶನ,ಹೊನ್ನಾವರ 2003
12. ನಾಯಕ ವಿ ಜಿ: ಹೊನ್ನ ಸಂಪುಟ (ಸ್ಮರಣ ಸಂಚಿಕೆ) 2002
13. ನಾಯಕ ಎನ್. ಆರ್.: ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನೃಪತುಂಗ ರಸ್ತೆ, ಬೆಂಗಳೂರು 1993
14. ವೃಷಬೇಂದ್ರ ಸ್ವಾಮಿ ಎಸ್.ಎಂ.(ಸಂ): ಜಾನಪದ ಸಾಹಿತ್ಯ ದರ್ಶನ ಭಾಗ–9 ಕನ್ನಡ ಅಧ್ಯಯನಪೀಠ, ಧಾರವಾಡ. 1988
15. ಸಿದ್ಧಲಿಂಗಯ್ಯ: ಗ್ರಾಮದೇವತೆಗಳು, ಮೂಲಭಾರತಿ, ಪ್ರಕಾಶನ, ಬೆಂಗಳೂರು. 1997
16. ಹಿರೇಮಠ ಎಸ್.ಎಸ್. :ಜಾತ್ರೆಗಳು, ಸಮತಾಪ್ರಕಾಶನ, ಹರಪ್ಪನಹಳ್ಳಿ 1994
17. ಹಿರೇಮಠ ಎಸ್.ಎಸ್.: ಹಬ್ಬಗಳು, ಸಮತಾಪ್ರಕಾಶನ, ಹರಪ್ಪನಹಳ್ಳಿ 1994
18. ಹೆಗಡೆ ಎಲ್.ಆರ್. :ಜಾನಪದ ವೈದ್ಯ, ಜನಸ್ಪಂದನ, ಗ್ರಂಥಮಾಲಾ, ಹೆಗಡೆ.ಕುಮಟಾ. 1981
19. ಹೆಗಡೆ ಎಲ್.ಆರ್.: ಜನಪದ ಜೀವನ ಮತ್ತು ಕಲೆ. 1977 ಸಮಾಜ ಪುಸ್ತಕಾಲಯ, ಧಾರವಾಡ
20. ಹೆಗಡೆ ಎಲ್.ಆರ್.: ಮಾತಿನಗಿಣಿ ನುಡಿದಾವೋ, ಎಲ್. ಆರ್. ಹೆಗಡೆ ಕೃತಿ ಪ್ರಕಾಶನಸಮಿತಿ, 1997ಶಿರಸಿ.